ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

# ಟೆಂಡರ್ ಅರ್ಜಿ

## ಕೆಲಸದ ಹೆಸರು

ಇಲಾಖಾ ರಂಗಮಂದಿರಗಳ ಸುಸಜ್ಜೀಕರಣ ಹಾಗು ಆಧುನೀಕರಣಕ್ಕೆ ತಾಂತ್ರಿಕ ಸಮೀಕ್ಷೆ ಹಾಗು ತಜ್ಞ ವಿಸ್ತೃತ ವರದಿ ಪಡೆಯುವ ಕುರಿತು

**ಟೆಂಡರ್ ಸೂಚಿಕೆ :-**

1. ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ
2. ಟೆಂಡರ್ ಪ್ರಕಟಣೆ
3. ಟೆಂಡರ್ ನ ನಿಬಂಧನೆಗಳು ಮತ್ತು ಷರತ್ತುಗಳು
4. ತಾಂತ್ರಿಕ ಬಿಡ್
5. ಆರ್ಥಿಕ ಬಿಡ್

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

# ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ

| | | | |
|---|---|---|---|
| 1 | ಟೆಂಡರ್ ಪ್ರಕಟಣೆಯ ದಿನಾಂಕ | | 02.07.2018 |
| 2 | ಟೆಂಡರ್ ಡ್ಯಾಕ್ಯೂಮೆಂಟ್ ಅಂತರ್ಜಾಲದಲ್ಲಿ ಪಡೆಯುವ ದಿನಾಂಕ | | 02.07.2018 |
| 3 | ಟೆಂಡರ್ ಡ್ಯಾಕ್ಯೂಮೆಂಟ್ ಅಂತರ್ಜಾಲದಲ್ಲಿ ಪಡೆಯಲು ಕೊನೆಯ ದಿನಾಂಕ | | 08.07.2018<br>ಸಂಜೆ 5.00 ಗಂಟೆವರೆಗೆ |
| 4 | ಭರ್ತಿಮಾಡಿದ ಟೆಂಡರ್ ಅನ್ನು ಕಚೇರಿಗೆ ತಲುಪಿಸಲು ಕೊನೆಯ ದಿನಾಂಕ | | 08.07.2018<br>ಸಂಜೆ 5.30 ಗಂಟೆವರೆಗೆ |
| 5 | ಬಿಡ್ ತೆರೆಯುವ ದಿನಾಂಕ ವೇಳೆ ಮತ್ತು ಸ್ಥಳ | | 09.07.2018<br>(ಬೆಳಗ್ಗೆ 11.00 ಗಂಟೆಗೆ)<br>ಕನ್ನಡ ಭವನ, ಜೆ.ಸಿ.ರಸ್ತೆ,<br>ಬೆಂಗಳೂರು-02 |

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

ಕರ್ನಾಟಕ ಸರ್ಕಾರ

# ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ.ರಸ್ತೆ ಬೆಂಗಳೂರು-5600002 ದೂ: 080-22213530 Email:kanbhavblr@gmail.com

---

DKC-20013/10/2018 ದಿನಾಂಕ:02.07.2018

## ಪ್ರಕಟಣೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನದ ಬೆಂಗಳೂರು ಹಾಗು ರಾಜ್ಯದ ಜಿಲ್ಲಾ ಕೇಂದ್ರಗಳ ಇತರೇ ರಂಗಮಂದಿರಗಳ ಸಜ್ಜೀಕರಣ ಹಾಗು ರಂಗಮಂದಿರಗಳ ಆಧುನೀಕರಣಕ್ಕೆ ಸಂಬಂಧಿಸಿದ ತಜ್ಞ ಯೋಜನಾ ವರದಿ ಪಡೆಯಲು ಏಕ ಬಿಡ್ ವಿಧಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

**1. ಕಾರ್ಯದ ಸಂಕ್ಷಿಪ್ತ ವಿವರ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಹಾಗು ಸಾಂಸ್ಕೃತಿಕ ಚಟುವಟಿಕೆ ನಡೆಸುವ ಸಂಘ ಸಂಸ್ಥೆಗಳಿಗೆ ಅನುಕೂಲವಾಗುವಂತೆ ಜಿಲ್ಲಾ ರಂಗಮಂದಿರಗಳನ್ನು ನಿರ್ಮಿಸಿರುತ್ತದೆ. ಜಿಲ್ಲಾ ರಂಗಮಂದಿರಗಳು ವಿವಿಧ ಹಂತಗಳಲ್ಲಿ ಹಾಗು ಅಲ್ಲಿನ ಸ್ಥಳಾವಕಾಶದ ಅನುಗುಣವಾಗಿ ಆಸನಗಳ ಸಂಖ್ಯೆಯು ಬೇರೆ ಬೇರೆಯಾಗಿರುತ್ತದೆ. ಜಿಲ್ಲಾ ರಂಗಮಂದಿರಗಳು ಬೀದರ್, ವಿಜಯಪುರ, ಕಲಬುರ್ಗಿ, ಕಾರವಾರ, ಬೆಳಗಾವಿ, ಚಿಕ್ಕಬಳ್ಳಾಪುರ, ಬಳ್ಳಾರಿ, ಮೈಸೂರು, ಚಿತ್ರದುರ್ಗ, ರಾಯಚೂರು, ತುಮಕೂರು, ಶಿವಮೊಗ್ಗ ಹಾಸನ, ಮಂಡ್ಯ ಹಾಗು ಕೋಲಾರದಲ್ಲಿವೆ. ರಂಗಮಂದಿಗಳ ನಿರ್ವಹಣೆಯನ್ನು ಇಲಾಖೆಯ ಸಹಾಯಕ ಮೇಲ್ವಿಚಾರಣೆಯಲ್ಲಿ ನಿರ್ವಹಿಸಲಾಗುತ್ತದೆ.

ರಂಗಮಂದಿರಗಳ ನಿರ್ಮಾನ ಸಂದರ್ಭದಲ್ಲಿ ಉಪಯೋಗಿಸಲಾದ ತಂತ್ರಜ್ಞಾನ ಹಾಗು ಉಪಕರಣಗಳ ಪ್ರಸ್ತುತ ದಿನಾಂಕಕ್ಕೆ ಹಳತಾಗಿದ್ದು, ನಿರ್ವಹಣಾ ವೆಚ್ಚವೂ ಹೆಚ್ಚಾಗಿರುತ್ತದೆ. ಆದ್ದರಿಂದ ರಂಗಮಂದಿರಗಳ ಆಂತರಿಕ ಸೌಲಭ್ಯಗಳಾದ ACOUSTIC TREATMENT, SOUND REINFORCEMENT ಹಾಗು ವೇದಿಕೆ ವಿನ್ಯಾಸ, ಬೆಳಕಿನ ವ್ಯವಸ್ಥೆ, ವೇದಿಕೆ ಪರದೆ, ಆಸನ ವ್ಯವಸ್ಥೆ, ಗಾಳಿ ಬೆಳಕಿನ ವ್ಯವಸ್ಥೆ, ಬೆಂಕಿ ನಿಯಂತ್ರಣ ವ್ಯವಸ್ಥೆ, ಸಿಸಿ ಕ್ಯಾಮರಾ ಅಳವಡಿಕೆ ಹಾಗು ತುರ್ತು ವಿದ್ಯುತ್ ಸರಬರಾಜು ವ್ಯವಸ್ಥೆಯ ಬಗ್ಗೆ ಹಾಗು ಕಟ್ಟಡದ ಆಧುನಿಕರಣದ ಕುರಿತು ಈಗಿರುವ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ ಎರಡು ಹಂತದ ಕಾಮಗಾರಿಗಳನ್ನು ಅಂದರೆ ಪ್ರಥಮ ಆದ್ಯತೆಯಲ್ಲಿ ತುರ್ತಾಗಿ ಕೈಗೊಳ್ಳಬೇಕಾದ ಕಾಮಗಾರಿ ಹಾಗು ಅದರ ರಂಗಮಂದಿರವಾರು ಒಟ್ಟಾರೆ ವೆಚ್ಚದ ಮಾಹಿತಿ ಹಾಗು ಎರಡನೇ ಹಂತದಲ್ಲಿ ಕೈಗೊಳ್ಳಬೇಕಾದ ಕಾಮಗಾರಿ ಹಾಗು ಅದರ ವೆಚ್ಚಗಳ ಬಗ್ಗೆ ಒಂದು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ಕೊಡಬೇಕಾಗುತ್ತದೆ. ಹಾಗು ಯೋಜನೆ ಒಟ್ಟಾರೆ ಸ್ವರೂಪ ಕೆಳಕಂಡಂತಿದೆ.

ಕಾರ್ಯದ ಸ್ವರೂಪ

| | |
|---|---|
| 1 | ಎಲ್ಲಾ ಜಿಲ್ಲಾ 15 ರಂಗಮಂದಿರಗಳಿಗೆ ಭೇಟಿ ನೀಡಿ ಅವುಗಳ ಪ್ರಸ್ತುತ ಸ್ಥಿತಿಯ ಬಗ್ಗೆ ಪರಿಶೀಲಿಸಿ ಅಲ್ಲಿನ ತಾಂತ್ರಿಕ ಹಾಗು ಇತರೇ ಕುಂದುಕೊರತೆಗಳ ಕುರಿತು ಸಂಪೂರ್ಣ ಅಧ್ಯಯನ ನಡೆಸುವುದು. |
| 2 | ಅಲ್ಲಿನ ಎಲ್ಲಾ ಕುಂದು ಕೊರತೆಗಳ ಬಗ್ಗೆ ಮಾಹಿತಿಯನ್ನು ಪಡೆದು ಅವುಗಳ ಪರಿಹಾರಕ್ಕೆ ಅಗತ್ಯ ತಾಮತ್ರಿಕ ಸಲಹೆಯನ್ನು ನೀಡುವುದು. |

| | |
|---|---|
| 3 | ಅಲ್ಲಿ ಮಾಡಬಹುದಾದ WALL / CEILING ACOUSTICS, SOUND REINFORCEMENT, STAGE LIGHTING, STAGE DRAPERY, GENERAL PURPOSE LIGHTING, VENTILATION, SEATING CONTROL ROOM, POWER SUPPLY MANAGEMENT ನಂತಹ ಮಹತ್ವದ ಬದಲಾವನೆಗಳ ಬಗ್ಗೆ ಟೆಂಡರ್ ಕರೆಯಲು ಅನುಕೂಲವಾಗುವಂತೆ ನಕ್ಷೆ , ರೂಪುರೇಷೆ ಹಾಗು ಅಗತ್ಯ ಛಾಯಾಚಿತ್ರಗಳನ್ನು ನೀಡುವುದು. |
| 4 | ರಂಗಮಂದಿರಗಳಲ್ಲಿ ಕೈಗೊಳ್ಳಬೇಕಾದ ಅಗತ್ಯ ಕಟ್ಟಡ ರಿಪೇರಿ ಕಾಮಗಾರಿಯ ಬಗ್ಗೆ ಮಾಹಿತಿ ಸಿದ್ಧಪಡಿಸುವುದು. |
| 5 | ಕಾಮಗಾರಿ ಕೈಗೆತ್ತಿಕೊಳ್ಳಲು ಬೇಕಾದ ಅಂತರರಾಷ್ಟ್ರೀಯ ಗುಣಮಟ್ಟದ ಪರಿಕರಗಳ ಬಗ್ಗೆ ತಾಂತ್ರಿಕ ವಿವರಣೆ ಹಾಗು ಖರಿದಿಸಬೇಕಾದ ಸಂಖ್ಯೆ ಹಾಗು ತಗಲುವ ವೆಚ್ಚದ ಬಗ್ಗೆ ಅಂದಾಜು ವೆಚ್ಚ ಸಿದ್ಧಪಡಿಸುವುದು. |
| 6 | ಕಾಮಗಾರಿಗಳ ಅನುಷ್ಟಾನಕ್ಕೆ ಟೆಂಡರ್ ಕರೆಯಲು ಹಾಗು ಅವುಗಳ ತಾಂತ್ರಿಕ ಪರಿಶೀಲನೆಗೆ ಸಹಕಾರ ನೀಡುವುದು. ಹಾಗು ಅನುಷ್ಟಾನ ಸಂಧರ್ಭದಲ್ಲಿ ಸಲಹೆ ನೀಡುವುದು. |
| 7 | ಮೇಲ್ಕಂಡ ಎಲ್ಲ ಕಾರ್ಯಕ್ಕೆ ಸಂಬಂಧಿಸಿದ ವಿಸ್ತೃತ ವರದಿ ನೀಡುವುದು. |

**2. ಟೆಂಡರ್ ನಲ್ಲಿ ಭಾಗವಹಿಸಲು ಕನಿಷ್ಠ ಅರ್ಹತೆಗಳು**

1. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ವ್ಯಕ್ತಿಗಳು ಮೆಲ್ಕಂಡ ಎಲ್ಲ ವಿಷಯಗಳ ಬಗ್ಗೆ ಜ್ಞಾನ ಹೊಂದಿರುವ ಬಗ್ಗೆ ನಿಗದಿತ ವಿದ್ಯಾರ್ಹತೆಯನ್ನು ಪಡೆದಿರಬೇಕು
2. ಮೇಲೆ ತಿಳಿಸಿದ ಕಾರ್ಯಗಳನ್ನು ನಿರ್ವಹಿಸಿದ ಬಗ್ಗೆ ಅಗತ್ಯ ಅನುಭವ ಹೊಂದಿರಬೇಕು.
3. ಯೋಜನೆಯನ್ನು ಕೈಗೊಳ್ಳಲು ಯೋಜಿಸುತ್ತಿರುವ ರಂಗಮಂದಿರಗಳಲ್ಲಿ ತಾಂತ್ರಿಕ ಪರಿಕರಗಳನ್ನು ಸರಬರಾಜು ಮಾಡಿದ ಹಾಗು ಮಾಡುವ ಉದ್ದೇಶಯುಳ್ಳ ಸರಬರಾಜುದಾರರು ಟೆಂಡರ್‌ನಲ್ಲಿ ಭಾಗವಹಿಸತಕ್ಕದ್ದಲ್ಲ.

**3. ಟೆಂಡರ್ ನೊಂದಿಗೆ ಈ ಮುಂದಿನ ಪ್ರತಿಗಳನ್ನು ಲಗತ್ತಿಸಿರಬೇಕು:**

1. ಕ್ರ.ಸಂ.**2**ರಲ್ಲಿ ತಿಳಿಸಿದ ವಿದ್ಯಾರ್ಹತೆಯ ಕುರಿತು ಪ್ರಮಾಣಪತ್ರಗಳು
2. ಅಗತ್ಯ ಅನುಭವದ ದೃಢೀಕರಿಸುವ ದಾಖಲೆಗಳು
3. ಕಾರ್ಯನಿರ್ವಹಿಸಲು ಪಡೆಯುವ ಕನಿಷ್ಟ ಒಟ್ಟಾರೆ ಸಂಭಾವನೆಯ ಮಾಹಿತಿ

**4. ಟೆಂಡರ್ ಷರತ್ತುಗಳು:**

1. **ಟೆಂಡರ್‌ನ ಅಂದಾಜು ಮೊತ್ತ ರೂ**.5,00,000/- **ಹಾಗು ಇ.ಎಂ.ಡಿ ಮೊತ್ತ ರೂ**.12,500/- **ಗಳನ್ನು ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಹೆಸರಿನಲ್ಲಿ ಡಿ.ಡಿ ರೂಪದಲ್ಲಿ ಟೆಂಡರ್ ಅರ್ಜಿಯೊಂದಿಗೆ** ಸಲ್ಲಿಸತಕ್ಕದ್ದು.
2. ಯೋಜನಾ ಸಿದ್ದತೆ ಕಾರ್ಯವನ್ನು **60** ದಿನಗಳ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
3. ಎಲ್ಲಾ ಜಿಲ್ಲೆಗಳಿಗೆ ಪ್ರಯಾಣಿಸುವ ಹಾಗು ವಸತಿ ವ್ಯವಸ್ಥೆಯನ್ನು ಇಲಾಖೆಯಿಂದ ಪೂರೈಸುವುದಿಲ್ಲ.
4. ಸಂಭಾವನೆಯನ್ನು ವಿಸ್ತೃತ ವರದಿಯನ್ನು ಸಲ್ಲಿಸಿದ ನಂತರವೇ ಪಾವತಿಸಲಾಗುವುದು.
5. ಯಾವುದೇ ಮುಂಗಡ ಪಾವತಿ ಮಾಡಲಾಗುವುದಿಲ್ಲ.

**6.** ವರದಿ ಸಲ್ಲಿಕೆಯ ನಂತರ ಯೋಜನೆ ಅನುಷ್ಠಾನದ ಸಂಧರ್ಭದಲ್ಲಿ ತಾಂತ್ರಿಕ ಸಲಹೆಯನ್ನು ಇಲಾಖೆಯು ಕೋರಿದಲ್ಲಿ ನೀಡಲು ಸಿದ್ಧರಿರಬೇಕು. ಹಾಗು ಈ ಕಾರ್ಯಕ್ಕೆ ಪ್ರತ್ಯೇಕ ಸಂಭಾವನೆ ಪಾವತಿಸಲಾಗುವುದಿಲ್ಲ.

**7.** ಒಂದು ವೇಳೆ ವರದಿ ಸಿದ್ಧತೆಯ ಕಾರ್ಯ ಸಮರ್ಪಕವಾಗಿ ನಡೆಯುತ್ತಿಲ್ಲ ಹಾಗು ವಿಳಂಬವಾಗುತ್ತಿದೆ ಎಂದು ಕಂಡು ಬಂದಲ್ಲಿ ಟೆಂಡರ್‌ನ್ನು ರದ್ದುಗೊಳಿಸುವ ಅಧಿಕಾರವನ್ನು ಇಲಾಖೆಯು ಹೊಂದಿರುತ್ತದೆ.

8. ಯಾವುದೇ ವಿವಾದ ಉಂಟಾದ ಸಂದರ್ಭದಲ್ಲಿ, ಅದನ್ನು ಬಗೆಹರಿಸಲು ಬೆಂಗಳೂರಿನ ನ್ಯಾಯಾಲಯಗಳು ಅಧಿಕಾರ ಹೊಂದಿರುತ್ತವೆ.

9. ಟೆಂಡರ್ ನಲ್ಲಿ ಯಶಸ್ವಿಯಾದ ವ್ಯಕ್ತಿಯು ರೂ.100/-ಗಳ ಛಾಪಾ ಕಾಗದದ ಮೇಲೆ ಇಲಾಖೆಯ ನಿಗದಿಪಡಿಸುವ ಎಲ್ಲ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿರುವ ಬಗ್ಗೆ ಕರಾರು ಬರೆದುಕೊಡಬೇಕು.

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು